Sri S. R. KANTHI.—I have already stated that the draft cadre and recruitment rules provide for 50 per cent recruitment.

Sri G. V. GOWDA.—If 50 per cent were to be recruited, how did you promote 4 persons ?

Sri S. R. KANTHI.—We ought to have done that; we have not done that.

National Rural Water Supply Scheme in the State for which Estimates have been prepared.

*Q.—331. Sri GANJI VEERAPPA (Harihar).—

Will the Government be pleased to state :—

(*a*) the number of National Rural Water Supply Scheme in the State for which estimates have been prepared during the year 1963-64;

(*b*) the number of schemes sanctioned and work completed during the above year 63-64 ;

(*c*) whether it is not a fact that for want of separte engineering staff for the work, not much progress has been made in this behalf and lot of delay is being caused to work up the schemes ;

(*d*) whether they propose to establsih a special engineering division for this purpose so as to popularise the scheme and increase the activities in this behalf and facilitate speedy and expeditious execution of these works ?

*A.—Sri KONDAJJI BASAPPA (Deputy Minister for Co-operation).—

(*a*) 52.

(*b*) Number of schemes sanctiond 28.
Number of works completed during 1963-64. Nil.

(*c*) Yes.

(*d*) Yes.

Sri GANJI VEERAPPA.—May I know the amount allotted in the budget in the year 1963-64 for the scheme of national rural water supply ?

Sri KONDAJJI BASAPPA.—In 1963-64 it is 20 lakhs and the amount spent was 16.73 lakhs.

Sri GANJI VEERAPPA.—May I know the agency that is now entrusted with the work of national rural water supply scheme ?

Sri KONDAJJI BASAPPA.—The regular P.W.D. is taking it up.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗ್ರಾಮಾಂತರ ಪ್ರದೇಶಗಳಿಗೆ ಪರಿಶುದ್ಧವಾದ ನೀರು ಸರಬರಾಜಿಗೋಸ್ಕರ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕಲಸಗಳನ್ನು ತಗೆದುಕೊಂಡಿದ್ದಿರಿ ?

Sri KONDAJJI BASAPPA.--There are about 52 works for which schemes have been prepared. They pertain to Raichur, Bidar, Gulbarga, Bijapur, North Canara, Kolar, Hassan, Chitaldrug, Mangalore, Mandya Chickmagalur.

Sri J. P. SARWESH.—Out of 28 sanctioned works how many will be completed by the end of this year and their names ?

Sri KONDAJJI BASAPPA.—So far none have been completed. They are all at different stages of progress. We are not definite as to which of them will be completed by the end of this year.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸ್ವಾಮಿ, ಈ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ಶಿವಮೊಗ್ಗ, ತುಮಕೂರು ಮತ್ತು ಮೈಸೂರು ಈ ಮೂರು ಜಿಲ್ಲೆಗಳನ್ನು ಸೇರಿಸಿವೆ ಕೈಬಿಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಅವುಗಳನ್ನು ಕೈಬಿಡಕ್ಕೆ ಉದ್ದೇಶವೇನೂ ಇಲ್ಲ. ಈ ಗ್ರಾಮಾಂತರ ನೀರು ಸರಬರಾಜಿಗೆ ಸಂಬಂಧಪಟ್ಟಹಾಗೆ ಯಾವ ಯಾವ ಪ್ರಪೋಜಲ್‌ಗಳು ಬರುತ್ತವೆಯೋ ಅವುಗಳನ್ನು ಪರಿಶೀಲನೆ ಮಾಡಿ ಯೋಜನೆಯಲ್ಲಿ ಸೇರಿಸಲಾಗುತ್ತದೆ.

Sri S. S. KOLKEBAIL.—Will the Government be pleased to name any village which has been given protected water supply ?

Sri KONDAJJI BASAPPA.—This is for the villages only. None have been completed so far.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಈ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟಹಾಗೆ ಬಿಜಾಪುರ ಜಿಲ್ಲೆಯಲ್ಲಿ ಯಾವುದಾದರೂ ಕೆಲಸಗಳನ್ನು ಕೈಗೆದುಕೊಂಡಿದ್ದೀರಾ ? ಮತ್ತು ಈ ಯೋಜನೆ ಸಂಬಂಧದಲ್ಲಿ ಯಾವುದಾದರೂ ಒಂದುಕಡೆಯಾದರೂ ಈಗಾಗಲೇ ಕೆಲಸವಲ್ಲಿ ತೊಡಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟಹಾಗೆ 52 ಯೋಜನೆಗಳಿಗೆ ಅಂದಾಜನ್ನು ತಯಾರು ಮಾಡಿದೆ. ಈ ಪೈಕಿ 28 ಯೋಜನೆಗಳು ಮಂಜೂರಾಗಿವೆ. ಕೆಲವು ಯೋಜನೆಗಳಿಗೆ ಟೆಂಡರ್ ಕರೆದು ಕೆಲಸ ನಡೆಯುತ್ತಿದೆ. ಆದರೆ ಯಾವ ಕೆಲಸವೂ ಇನ್ನು ಕಂಪ್ಲೀಟ್ ಆಗಿಲ್ಲ.

Sri G. V. GOWDA.—May I know when the Special Engineering Division would come into being ?

Sri KONDAJJI BASAPPA.—The Government is very keen. The Chief Engineer has recommended to the Government that a Public Health Engineering Circle with 4 Construction and 3 Investigation Divisions should be formed and we are examining the proposal.

Sri N. O. SAMAJI.—(Marathi).

Mr. DEPUTY SPEAKER.—The Hon'ble Member wants to know whether any survey has been made.

ಶ್ರೀ ಕೊಂಡಜ್ಜಿ ಬಸಪ್ಪ.—ಸರ್ವೇಯನ್ನು ಮಾಡಿದ್ದಾರೆ. ಇಡೀ ನಮ್ಮ ಸ್ಟೇಟಿನಲ್ಲಿ ಈ ಯೋಜನೆಗೋಸ್ಕರ 24 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಮತ್ತು ಈ ಯೋಜನೆಯನ್ನು ಅದಷ್ಟು ತೀವ್ರವಾಗಿ ಸರಪೇರಿಸಲು ಅನುಕೂಲವಾಗುವಂತೆ ಮಾಡುವುದಕ್ಕಾಗಿ ಪ್ರತ್ಯೇಕ ವಿಶೇಷ ಇಂಜಿನಿಯರಿಂಗ್ ವಿಭಾಗವೊಂದನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದವರು ಉದ್ದೇಶಿಸಿದ್ದಾರೆ.

ಶ್ರೀಮತಿ ಬಿ. ಬಸವರಾಜೇಶ್ವರಿ.—ಆ ಸರ್ವೆ ಪ್ರಕಾರ ಎಷ್ಟು ಹಳ್ಳಿಗಳು ಈ ಯೋಜನೆಯಲ್ಲಿ ಬರುತ್ತವೆ ?

—ಶ್ರೀ ಕೊಂಡಜ್ಜಿ ಬಸಪ್ಪ.—ಸುಮಾರು 5 ಸಾವಿರ ಹಳ್ಳಿಗಳಿಗೆ ಜೇಲ್ವಟ್ಟು ಹಳ್ಳಿಗಳು ಈ ಯೋಜನೆಯಲ್ಲಿ ಬರುತ್ತವೆ.

ಶ್ರೀಮತಿ ಸುಶೀಲಾಬಾಯಿ ಪೀರಾಜಿದಾರ್.—ಈಗ ತಾವು ಹೇಳಿದಿರಿ, 28 ಕೆಲಸಗಳು ಮುಂಜೂರಾಗಿವೆ ಎಂದು. ಈ 28 ಕೆಲಸಗಳಲ್ಲಿ ಎಷ್ಟು ಕೆಲಸಗಳು ಶುರು ಆಗಿವೆ? ಮತ್ತು ಅವು ಎಲ್ಲೆಲ್ಲಿ ಶುರು ಆಗಿವೆ?

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲಾ ಕೆಲಸಗಳು ನಡೆಯುತ್ತಿವೆ. ಆ ಕೆಲಸಗಳು ರಾಯಚೂರ್, ಬಿಜಾಪುರ, ಬೆಳಗಾಂ, ಹಾಸನ, ಸಾತ್ ಕೆನರಾ, ಚಿತ್ರದುರ್ಗ, ಮಂಡ್ಯ, ಚಿಕ್ಕಮಗಳೂರು, ಕೋಲಾರ ಮುಂತಾದ ಸ್ಥಳಗಳಲ್ಲಿ ನಡೆಯುತ್ತಾ ಇವೆ.

ಶ್ರೀಮತಿ ಬಿ. ಬಸವರಾಜೇಶ್ವರಿ.—ಈ ಗ್ರಾಮಾಂತರ ನೀರು ಸರಬರಾಜು ಯೋಜನೆಯು ನಂಬಂಧವ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಪಬ್ಲಿಕ್ ಕಾಂಟ್ರಿಬ್ಯೂಷನ್ 25 ಪರ್ಸೆಂಟ್ ಕೊಡಬೇಕೆಂಬ ಇತ್ತು, ಈಗ 10 ಪರ್ಸೆಂಟ್ ಕೊಡಬೇಕೆಂದು ಮಾಡಿದ್ದಾರೆ. ಅದ್ದರಿಂದ ಈಗ ತಾವು ಹಿಂದೆ ಇದ್ದಂತೆ 25 ಪರ್ಸೆಂಟ್ ಕರೆಕ್ಟ್ ಮಾಡುತ್ತೀರೋ ಅಥವಾ 10 ಪರ್ಸೆಂಟ್ ಕರೆಕ್ಟ್ ಮಾಡುತ್ತೀರೊ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಿಂದ ಮುಂಚೆ ಕೆಲವು ವಿಲೇಜ್ ಪಂಚಾಯತಿಗಳಿಗೆ ತೊಂದರೆ ಯಾಗಬಹುದೆಂದು ಪಬ್ಲಿಕ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಶಕ್ತಿ ಇಲ್ಲದ ಇರುವವರಿಗೆ 5 ಪರ್ಸೆಂಟ್‌ಗೆ ಕಡಮೆ ಮಾಡಬೇಕೆಂದು ಡೆವೆಲೊಪ್ಮೆಂಟ್ ಕಮಿಷನರ ಮತ್ತು ಡಿಪಿಜಿ ಕಮಿಷನರುಗಳಿಗೆ ಇನ್‌ಸ್ಟ್ರಕ್ಷನ್ ಕೊಡಲಾಗಿದೆ.

ಶ್ರೀ ಪಾಲ ಚನ್ನಪ್ಪ.—ಈಗ ಮುಂಜೂರಾಗಿರತಕ್ಕ 28 ಕಾಮಗಾರಿಗಳನ್ನೂ ಜರೂರಾಗಿ ಮುಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಕೆಲಸಗಳನ್ನು ಮಾಡುವುದಕ್ಕೆ ಚೆಂಡರ್ ಕರೆದರೂ ಕೂಡ ಸರಿಯಾದ ಪ್ರಜ್ಞೆ ಸಿಕ್ಕುತ್ತಿಲ್ಲ. ಆದ್ದರಿಂದ ಈಗ ಒಂದು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಸರ್ಕಲ್, ಮತ್ತು ನಾಲ್ಕು ಕನ್‌ಸ್ಟ್ರಕ್ಷನ್ ಡಿವಿಜನ್ಸ್, ಮೂರು ಇನ್‌ವೆಸ್ಟಿಗೇಷನ್ ಡಿವಿಜನ್ಸ್ ಮಾಡಿ ಆ ಕೆಲಸವನ್ನು ತೀವ್ರಗತಿಯಿಂದ ಮಾಡಬೇಕೆಂದು ಸರ್ಕಾರಕ್ಕೆ ಒಂದು ಪ್ರಪೋಜಲ್ ಬಂದಿದೆ, ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎ. ಶರಣಪ್ಪ.—ಬೀದರ ಮತ್ತು ಗುಲ್ಬರ್ಗದಲ್ಲಿ ಎಷ್ಟು ತೆಗೆದುಕೊಂಡಿದ್ದೀರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಹೈದರಾಬಾದ್ ಕರ್ನಾಟಕ ಡಿವಿಜನ್ ರಾಯಚೂರಿನಲ್ಲಿ, ಕೊಪ್ಪಳ ಎಂಬಲ್ಲಿ ಒಂದು ಕಡೆ ತೆಗೆದುಕೊಂಡಿವೆ.

Sri S. S. KOLKEBAIL.—May I know the Central grant for these rural water supply both for II and III plans?

Sri KONDAJJI BASAPPA.—This is for the year 1963-64. and that information is not available. For these schemes the Central contribution is 50 per cent of the total cost and the remaining will have to be contributed by the State Government and the local bodies together.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಗ್ರಾಮಾಂತರ ಪ್ರದೇಶಗಳಿಗೆ ಶುದ್ಧವಾದ ನೀರಿನ ಪೂರೈಕೆಗೋಸ್ಕರವಾಗಿ ಏನಾದರೂ ಒಂದು ಯೋಜನೆ ಹಾಕಿಕೊಂಡಿದ್ದೀರ? ಏನಾದರೂ ಒಂದು ಫೇಸ್ಡ್ ಪ್ರೋಗ್ರಾಂ ಇದ್ದು ಅದನ್ನು ಎಷ್ಟು ವರ್ಷಗಳಲ್ಲಿ ಸರಕಾರಕ್ಕೆ ಪೂರ್ತಿಗೊಳಿಸುವುದಕ್ಕೆ ಸಾಧ್ಯ?

ಶ್ರೀ ಕೊಂಡಜ್ಜಿ ಬಸಪ್ಪ.—ಒಂದು ಕಾಂಪ್ರಿಹೆನ್ಸಿವ್ ಸ್ಕೀಮು ಇದೆ. ಅದಕ್ಕೆ 24 ಕೋಟಿ ರೂಪಾಯಿ ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿದೆ. ಅದಕ್ಕೋಸ್ಕರವಾಗಿ ಇಂಡಿಯಾ ಸರ್ಕಾರದವರನ್ನು ಫೈನಾನ್ಸಿಯಲ್ ಅಸಿಸ್ಟೆನ್ಸಿಗಾಗಿ ಕೇಳಿಕೊಂಡಿದ್ದೇವೆ. ಅದು ಇನ್ನೂ ಕರೆಸ್ಪಾಂಡೆನ್ಸ್‌ದಲ್ಲಿದೆ. ಎಷ್ಟು ಬೇಗ ಕೊಟ್ಟರೆ ಅಷ್ಟು ಬೇಗ ಮಾಡುತ್ತೇವೆ. ಈ ಪರ್ಷ ಆಡಿಶನಲ್ 25 ಲಕ್ಷ ಕೊಡಿ ನಾನ್-ಪ್ಲಾನ್ ಎಕ್ಸ್‌ಪೆಂಡಿಚರಿನಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ಎಷ್ಟು ತ್ವರಿತವಾಗಿ ಇಂಡಿಯಾ ಸರಕಾರದಿಂದ ಅದು ದೊರೆಯುತ್ತದೆಯೋ, ಅಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ಎಸ್. ಪಾಟೀರ್.—ಬೆಂಗಳೂರು ನಗರಕ್ಕೆ ನೀರು ಪೂರ್ಯೆಕೆ ಆವಾಗ ತಾವು ಏನೇನೋ ವಿಧಾನವನ್ನು ಮಾಡಿ, ಅಲ್ಪಕಾಲದಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ ದೇಶಾದ್ಯಂತದ ನೀರು ಸರಬರಾಜಿಗೆ ಕೇವಲ 28 ಯೋಜನೆಗಳನ್ನು ತೆಗೆದುಕೊಂಡಿರುವುದನ್ನು ನೋಡಿದರೆ, ಹಳ್ಳಿಗಳಲ್ಲಿರುವ ಜನರನ್ನು ಸ್ವಲ್ಪ ಅಲಕ್ಷ ಮಾಡಿದ್ದೀರಿ ಎಂಬುದನ್ನು ಪುಷ್ಟೀಕರಿಸುತ್ತದಲ್ಲವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ, ಇಲ್ಲ. ಸದಸ್ಯರು ಹಾಗೆ ತಿಳಿದುಕೊಳ್ಳಬಾರದು. ಇದರಲ್ಲಿ ಒಂದು ಪ್ರಶ್ನೆ ಇದೆ. ನಾವು ಇಂತಿಂತ ಹಳ್ಳಿಯನ್ನು ಸೆರೆಕ್ಕು ಮಾಡಿ ಎಂದು ಕೇಳುವುದಿಲ್ಲ. ಇವತ್ತಿಗೆ ಗ್ರಾಮ ಪಂಚಾಯಿತಿ ತೀರ್ಮಾನ ಬೇಕಾಗಿರುವುದರಿಂದ, ಅನೇಕ ಗ್ರಾಮ ಪಂಚಾಯಿತಿಗಳಿಗೆ 25 ಪರ್ಸೆಂಟು ಖರ್ಚನ್ನು ಕೊಡುವ ಶಕ್ತಿ ಇರುವುದಿಲ್ಲ. ಗ್ರಾಮ ಪಂಚಾಯಿತಿಗಳು ರೆಸಲ್ಯೂಷನ್ ಮಾಡಿಕೊಂಡು ತಮ್ಮ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಎಲ್ಲೆಲ್ಲಿ ಮುಂದೆ ಬಂದಿದ್ದಾರೋ, ಅಂಥ ಸಂದರ್ಭದಲ್ಲಿ ನಾವು ಶಿಫಾರಸು ಮಾಡಿದ್ದೇವೆ.

ಶ್ರೀ ಎಂ. ವಿ. ದೇವ್.—ತುಂಕೂರು ಡಿಸ್ಟ್ರಿಕ್ಟ್ ಬಹು ಭಾಗ ಪದೇ ಪದೇ ಕ್ಷಾಮಕ್ಕೆ ಒಳಗಾಗಿದೆ. ಹಾಗಲವಾಡಿ ಮತ್ತು ಕಡಬ ಪಂಚಾಯಿತಿಯವರು ವಾಟರ್ ಸಪ್ಲೈ ಮಾಡಿ ಎಂದು ರೆಸಲೂಶನ್ ಮಾಡಿ ಕಳುಹಿಸಿದ್ದಾರೆ, ಆದರೆ ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಸ್ಕೀಮು ಹೇಗಿದೆಯೆಂದರೆ, ಯಾವುದಾದರೂ ಒಂದು ಗ್ರಾಮ ಪಂಚಾಯಿತಿ ತಮ ಗೆ ನೀರು ಸರಬರಾಜು ಆಗಬೇಕು ಎಂದು ಹೇಳಿ ಒಂದು ರೆಸಲ್ಯೂಷನ್ ಪಾಸು ಮಾಡಿ ಕಳುಹಿಸಿದ ಸಂದರ್ಭದಲ್ಲಿ, ಫಿನಾನ್ಸಿಯರ್ ಆಸ್ಪೆಕ್ಟ್ ನೋಡುತ್ತೇವೆ. ಅವರ ಭಾಗ ಕೊಡುವ ಶಕ್ತಿ ಇದ್ದರೆ ಶಿಫಾರಸು ಮಾಡುತ್ತೇವೆ. ಟೇಫ್ ಇಂಜಿನಿಯರು ಆಥವ ಸೂಪರಿಂಟೆಂಡಿಂಗ್ ಇಂಜಿನಿಯರು ಸ್ಕೀಮು ಎಕ್ಸಾಮಿನ್ ಮಾಡಿ ಒಪ್ಪಿದರೆ ತಡವಾಗುವುದಿಲ್ಲ. ಅದು ಸರ್ಕಾರಕ್ಕೆ ಬಂದ ಕೂಡಲೇ ಸೆಂಟ್ರಲ್ ಅಸಿಸ್ಟೆನ್ಸು ಸಿಗುತ್ತದೆ. ಈ ಸಂದರ್ಭದಲ್ಲಿ ಸರಕಾರದಲ್ಲಿ ತಡವಾಗುವುದೇ ಇಲ್ಲ. ಬಹುಶಃ ಆ ಪಂಚಾಯ್ತಿಗಳ ನಿರ್ಣಯಗಳು ಸರಕಾರಕ್ಕೆ ಬಂದಿಲ್ಲ.

ಶ್ರೀ ಕೆ. ಪಿ ರೇವಣ್ಣಸಿದ್ದಪ್ಪ.—ಸಹಕಾರ ಮತ್ತು ಡೆವಲಪ್‌ಮೆಂಟು ಮಿನಿಸ್ಟರು ರಷ್ಯಕ್ಕೆ ಹೋಗಿದ್ದರಲ್ಲ. ಅಲ್ಲಿ ನೀರನ್ನು ಯಾವ ರೀತಿ ಕುಡಿಯುತ್ತಾರೆಂದು ನೋಡಿಕೊಂಡು ಬಂದಿದ್ದಾರೋ ಮತ್ತು ಏನಾದರೂ ಸ್ಕೀಮು ಮಾಡಿದ್ದಾರೋ ?

ಶ್ರೀ ಚೆನ್ನಪ್ಪ ವಾಲಿ.—ಕುಡಿಯುವುದು ನೋಡಿದಾರೆಯೇ ಅಂದರೆ ಏನು ಅರ್ಥ ?

(ಉತ್ತರವಿಲ್ಲ)

Sri N. O. SAMAJI.—(Marathi)

ಶ್ರೀ ಕೊಂಡಜ್ಜಿ ಬಸಪ್ಪ.—ಬೆಳಗಾಂ ಜಿಲ್ಲೆಯ ಎಂಕೆ ಹುಬ್ಬಿ, ಗೋವಿಗಲ್, ಸಂಪಗಾಂ-ಬೆಳಗಾಂ, ಯರಗಟ್ಟಿ-ಬೆಳಗಾಂ—ಇಷ್ಟಕ್ಕೆ ಮಂಜೂರಾತಿ ಕೊಟ್ಟಿದೆ.

Sri GANJI VEERAPPA.—To avoid delay, will the Government think of opening a Sub-Division (P W.D) and simplify the procedure to see that the schemes are carried out early.

Sri KONDAJJI BASAPPA.—The procedure is simple. There is no complication at all. All that we want is a resolution from the Village Panchayat. Immediately after it is received, action will be taken. The Government of India will sanction the scheme in no time.